ನರೇಂದ್ರ ಪೈ

# ಮನುಷ್ಯನ ಗುರುತಿನ ನೆಲೆಗಳ ಶೋಧ

ಕನ್ನಡ ಹಾಗೂ ಇಂಗ್ಲಿಷ್‌ನಲ್ಲಿ ಇಪ್ಪತ್ತಕ್ಕೂ ಹೆಚ್ಚು ಕೃತಿಗಳನ್ನು ರಚಿಸಿರುವ ಕೃಷ್ಣಮೂರ್ತಿ ಚಂದರ್ ಮೈಸೂರು ವಿಶ್ವವಿದ್ಯಾಲಯದ ಇಂಗ್ಲಿಷ್ ವಿಭಾಗದ ಮುಖ್ಯಸ್ಥರಾಗಿದ್ದವರು, ಕೆನಡಾದ ಯಾರ್ಕ್ ವಿಶ್ವವಿದ್ಯಾಲಯದ ಸಂಶೋಧನಾ ವಿದ್ಯಾರ್ಥಿಯಾಗಿದ್ದವರು. 'ಅಸ್ಮಿತೆ' ಚಂದರ್ ಅವರ ನಾಲ್ಕನೆಯ ಕಥಾಸಂಕಲನ. ಕನ್ನಡ ಸಣ್ಣಕತೆಯ ಜಗತ್ತಿನಲ್ಲಿ ಅಷ್ಟಾಗಿ ಚರ್ಚಿತವಲ್ಲದ ಈ ಹೆಸರು ಮೊದಲಿಗೆ ಯಾರೋ ಉದಯೋನ್ಮುಖ ಕತೆಗಾರನದ್ದಿರಬಹುದೆಂದು ಭಾವಿಸುವ ಸಂಭವ ಇದೆ ಎನಿಸುವುದರಿಂದ ಈ ಪರಿಚಯ ಪ್ರಸ್ತುತವಾಗುತ್ತದೆ.

"ಈಗೊಂದು ಅರ್ಧಶತಮಾನದಿಂದ ಕನ್ನಡದಲ್ಲಿ ಜೋಲುಮೋರೆ ಸಾಹಿತ್ಯಕ್ಕೆ ಹೆಚ್ಚು ಹೆಚ್ಚು ಬೆಲೆ ಬಂದಿದೆ. ಜಗತ್ತಿನ ಕ್ಲಿಷ್ಟತೆ, ಸಂಕೀರ್ಣತೆ, ವಿಶ್ವದುಃಖ, ಅದಕ್ಕೆ ಬುದ್ಧನ ಮುಲಾಮು ವಗೈರೆ ವಗೈರೆ, ದೊಡ್ಡ ಹೊರೆಯಾಗಿ ಕನ್ನಡದ ತಲೆಯ ಮೇಲೆ ಕೂತಿದೆ. ಇಂತಹ ಕರುನಾಡ ಕರಿಮೋಡಗಳ ನೆರಳಿನಿಂದ ಕೊಂಚ ಹೊತ್ತು ಅಪ್ಪಿತಪ್ಪಿ ಬಿಸಿಲು ಬಂದರೂ ಅದು ಗಮನಾರ್ಹ, ಸ್ವಾಗತಾರ್ಹ ಅನ್ನೋಣವೇ?... ನಮ್ಮ ದೊಡ್ಡ ದೊಡ್ಡ ಹೆಸರಿನ ಬರಹಗಾರರ ಕೃತಿಗಳನ್ನು ಓದಿ ನಾನು ಬಗ್ಗಲಿಲ್ಲವಾದರೂ ಕುಗ್ಗಿದ್ದೆ. ಚಂದರ್‌ನ ಕತೆಗಳು ನನಗೆ ಭೇಷಾಗಿ ಚಾಚಿ ಮೈಮುರಿದ ಖುಷಿ ಕೊಟ್ಟವು." ಎನ್ನುತ್ತಾರೆ ಪಂಡಿತ ರಾಜೀವ ತಾರಾನಾಥರು ಈ 'ಅಸ್ಮಿತೆ' ಸಂಕಲನದ ಕತೆಗಳ ಬಗ್ಗೆ.

ಸಂಕಲನದ ಹೆಸರಿಗೆ ತಕ್ಕಂತೆ ಇಲ್ಲಿನ ಹನ್ನೆರಡೂ ಕತೆಗಳಲ್ಲಿ ಮನುಷ್ಯನ ಅಸ್ಮಿತೆಯ ಕುರಿತಾದ ಜಿಜ್ಞಾಸೆ ಮತ್ತು ಹುಡುಕಾಟವೇ ವಿಭಿನ್ನವಾದ ನೆಲೆಗಳಲ್ಲಿ ಸಾಗುತ್ತದೆ. ಆದರೆ, ಇಂಥ 'ಯೋಜಿತ' ಕತೆಗಳ ತಾಂತ್ರಿಕ–ರಾಚನಿಕ ಕುರುಹುಗಳು ಕಣ್ಣಿಗೆ ಎದ್ದು ಕಾಣಿಸದಷ್ಟು ಈ ಕತೆಯ ನಿರೂಪಣೆಯ ತಿಳಿಹಾಸ್ಯ, ಲಘು ಲಯದ ಕಥನ ಮತ್ತು ಸಾಮಾನ್ಯನೊಬ್ಬನ ದೈನಂದಿನಗಳ ಮೂಲಕವೇ ಸಾಗುವ ಕಥಾನಕದ ಹಂದರ ಮನಸೆಳೆಯುತ್ತದೆ ಎನ್ನುವುದೇ ಈ ಕತೆಗಳ ನಿಜವಾದ ಯಶಸ್ಸು. ರಾಜೀವ ತಾರಾನಾಥರ ಖುಶಿಗೆ ಕಾರಣವಾದ ಈ ಅಂಶದ ಜೊತೆಗೇ ಈ ಕತೆಗಳಲ್ಲಿ ಮಹತ್ವಾಕಾಂಕ್ಷೆಯ ಹಂಬಲವೂ ಇದೆಯೆನ್ನುವುದನ್ನು ನಾವು ಮರೆಯುವಂತಿಲ್ಲ. ಈ ಕತೆಗಳನ್ನು ಓದುವಾಗ ಮತ್ತೆ ಮತ್ತೆ ನೆನಪಾಗುವ ಕನ್ನಡದ ಇಬ್ಬರು ಕತೆಗಾರರೆಂದರೆ ವಿವೇಕ ಶಾನಭಾಗ ಮತ್ತು ಎಸ್. ಸುರೇಂದ್ರನಾಥ್. ಇದನ್ನು ವಿವರಿಸುವುದರ ಮೂಲಕವೇ ಕೃಷ್ಣಮೂರ್ತಿ ಚಂದರ್ ಅವರ ಕತೆಗಳನ್ನು ಗ್ರಹಿಸುವುದು ಸರಿಯೇನೋ.

ವಿವೇಕ ಶಾನಭಾಗರ 'ನಿಲುಕು' ('ಲಂಗರು' ಸಂಕಲನ), 'ಇನ್ನೂ ಒಂದು' (ಕಾದಂಬರಿ), 'ಮತ್ತೊಬ್ಬನ ಸಂಸಾರ' ಮತ್ತು 'ಥೂ ಕೃಷ್ಣ' (ಎರಡೂ 'ಮತ್ತೊಬ್ಬನ ಸಂಸಾರ' ಸಂಕಲನ), 'ನಿರ್ವಾಣ', 'ಕೋಳಿ ಕೇಳಿ ಮಸಾಲೆ', 'ವಿಚಿತ್ರಕತೆ' ('ಘಾಚರ್ ಘೋಚರ್' ಸಂಕಲನ) ಮುಂತಾದ ಕತೆಗಳನ್ನು ಓದಿರುವವರಿಗೆ ಈ 'ಅಸ್ಮಿತೆ' ಸಂಕಲನದಲ್ಲಿ ಕೃಷ್ಣಮೂರ್ತಿ ಚಂದರ್ ಅವರು